ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಅಕ್ಟೋಬರ್ 6 , 2014

## ಬಕ್ರೀದ್ : ರಾಜ್ಯದ ಮುಸಲ್ಮಾನ ಬಾಂಧವರಿಗೆ ಮುಖ್ಯಮಂತ್ರಿ ಶುಭಾಶಯ

ಬೆಂಗಳೂರು, ಅಕ್ಟೋಬರ್ 6 :

ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಎಲ್ಲಾ ಮುಸಲ್ಮಾನ ಬಾಂಧವರಿಗೆ ಶುಭ ಕೋರಿದ್ದಾರೆ.

ತ್ಯಾಗ–ಬಲಿದಾನಗಳ ಸಂಕೇತವಾದ ಈದ್–ಉಲ್–ಅಜಾ ಎಂದು ಕರೆಯಲ್ಪಡುವ ಬಕ್ರೀದ್ ಹಬ್ಬವು ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡು, ಹೊಸ ಬಟ್ಟೆ ಧರಿಸಿ, ಬಂಧು ಮಿತ್ರರೊಂದಿಗೆ ಭೋಜನವನ್ನು ಸವಿದು, ಅರ್ಹರಿಗೆ ಮತ್ತು ಆತ್ಮೀಯರಿಗೆ ಕೊಡುಗೆಗಳ ಕೊಟ್ಟು ಸಂಭ್ರಮೋಲ್ಲಾಸಗಳನ್ನು ಹಂಚಿಕೊಳ್ಳುವ ವಿಶಿಷ್ಠ ಹಬ್ಬವೆನಿಸಿದೆ. ಎಲ್ಲರೂ ಒಗ್ಗೂಡಿ ಆಚರಿಸುವ ಈ ಹಬ್ಬವು ನಾಡಿನ ಎಲ್ಲೆಡೆ ಸೋದರತಾ ಭಾವ ಮೂಡಿಸಲು ಸಹಕಾರಿಯಾಗಲಿದೆ. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಮುಸಲ್ಮಾನ ಬಾಂಧವರಿಗೆ *ಈದ್ ಮುಬಾರಕ್* ಹೇಳಲು ಇಚ್ಛಿಸುತ್ತೇನೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

**********

ಡಿ ಪಿ ಎಂ